

# ಎಲ್ಲಿಯ ಭಯಾನಕ ಮೊಸಳೆ, ಎಲ್ಲಿಯ ಪುಟಾಣಿ ಹಕ್ಕಿ!

ಜಗತ್ತಿನ ಅತ್ಯಂತ ಪುರಾತನ ಜೀವಿಗಳಲ್ಲಿ ಮೊಸಳೆಯೂ ಒಂದು. ಸರಿ ಸುಮಾರು 200 ದಶಲಕ್ಷ ವರ್ಷಗಳ ಹಿಂದೆಯೇ ಈ ಜೀವಿಯ ಅಸ್ತಿತ್ವ ಭೂಮಿಯಲ್ಲಿತ್ತು. ಮೊಸಳೆ ಅಂದಕೂಡಲೇ ಅದರ ರೂಪವೇ ನೆನಪಿಗೆ ಬರುತ್ತದೆ. ಉದ್ದನೆಯ ಬಾಲ, ಕಲ್ಲಿನಂತಹ ದೇಹ, ಗರಗಸದಂತಹ ಹಲ್ಲುಗಳು – ಹೀಗೆ ಕ್ರೂರಪ್ರಾಣಿಯೊಂದರ ಚಿತ್ರಣ ಕಣ್ಣಮುಂದೆ ಬರುತ್ತದೆ. ಮೊಸಳೆ, ಒಂದು ಕಡೆ ಹಿಂಸೆಯನ್ನುಂಟು ಮಾಡುವ ಪ್ರಾಣಿಯಂತೆ ಕಂಡರೆ, ಕೆಲವೊಮ್ಮೆ ಶಾಂತ ಸ್ವಭಾವದ ಜೀವಿಯಂತೆಯೂ ಕಾಣುತ್ತದೆ. ಒಂದು ಜಾತಿಯ ಹಕ್ಕಿಗಳ ಪಾಲಿಗೆ ಮೊಸಳೆ ಆಪ್ತಮಿತ್ರ ಆಗಿರುವುದಂತೂ ನಿಸರ್ಗದ ಸೋಜಿಗವೇ ಸರಿ.

ಮೊಸಳೆ ಉಭಯವಾಸಿ. ನೀರು ಮತ್ತು ನೆಲ ಎರಡೂ ಕಡೆಯು ವಾಸಿಸಬಲ್ಲ ಸಾಮರ್ಥ್ಯ ಅದಕ್ಕಿದೆ. ಸಾಮಾನ್ಯವಾಗಿ ನದಿ, ಜೌಗು ಪ್ರದೇಶ, ಸರೋವರ ಇದರ ಆವಾಸ. ಇಂಗ್ಲಿಷ್‌ನಲ್ಲಿ ಮೊಸಳೆಯನ್ನು ಕ್ರೊಕೋಡೈಲ್ ಎನ್ನುತ್ತಾರೆ. ಗ್ರೀಕ್ ಮೂಲದ ಈ ಪದದ ಅರ್ಥ ಹಲ್ಲಿ. ಮೊಸಳೆ ಕೂಡ ದೊಡ್ಡ ಗಾತ್ರದ ಹಲ್ಲಿಯಂತೆಯೇ ಕಾಣಿಸುತ್ತದೆ.

ಸಣ್ಣ ಮೊಸಳೆ ಸಾಮಾನ್ಯವಾಗಿ 5 ಮೀ ಉದ್ದವಿದ್ದರೆ, ದೊಡ್ಡ ಮೊಸಳೆ ಸುಮಾರು 16 ಮೀ ಉದ್ದವಿರುತ್ತದೆ. ಆಶ್ಚರ್ಯ ಎಂದರೆ ಉಪ್ಪು ನೀರಿನ ಮೊಸಳೆಗಳು ಗಾತ್ರದಲ್ಲಿ ತುಂಬಾ ದೊಡ್ಡದಾಗಿದ್ದು, ಕೆಲವು ಮೊಸಳೆಗಳು ಒಂದು ಟನ್ ತೂಕವನ್ನು ಹೊಂದಿರುತ್ತವೆ. ಮೊಸಳೆಗಳು ಒಮ್ಮೆ 20ರಿಂದ 80 ಮೊಟ್ಟೆಗಳನ್ನು ಇಡುತ್ತವೆ. 80 ದಿನಗಳ ಕಾಲ ಕಾವು ಕೊಟ್ಟು ಮರಿ ಮಾಡುತ್ತವೆ.

**ನೀರಿನಲ್ಲೂ ನೆಲದಲ್ಲೂ ವಾಸಿಸಬಲ್ಲ ಮೊಸಳೆಯ ಚೂಪು ಹಲ್ಲುಗಳನ್ನು ಕಂಡರೆ ಎಲ್ಲರಿಗೂ ಭಯ. ಆದರೆ, ಮೊಸಳೆಯ ಕುರಿತಾದ ಸ್ವಾರಸ್ಯಕರ ಸಂಗತಿಗಳು ಕುರೂಪಿಯಂತೆ ಕಾಣಿಸುವ ಈ ಜೀವಿಯ ಬಗ್ಗೆ ಆಸಕ್ತಿ ಹುಟ್ಟಿಸುವಂತಿವೆ.**

**■ ಜೇಮ್ಸ್ ಆಡ್ರಿನ್ ಪಾಯಸ್**

ಅಂದಹಾಗೆ ಮೊಸಳೆಯ ಮೊಟ್ಟೆ ಒಡೆಯುವುದು ಹೇಗೆ ಗೊತ್ತಾ? ಬಾಯಿಯ ಒಳಗೆ ಮೊಟ್ಟೆಯನ್ನು ಇಟ್ಟುಕೊಂಡು, ಮರಿಯಾದ ನಂತರವೂ ಬಾಯಿಯಲ್ಲಿ ಇಟ್ಟುಕೊಂಡು ರಕ್ಷಿಸುತ್ತದೆ. ಇವುಗಳ ಪ್ರಮುಖ ಆಹಾರ ಮೀನು, ಸಸ್ತನಿಗಳು, ಹಕ್ಕಿಗಳು. ಮೊಸಳೆಗಳಿಗೆ ಪ್ರತಿ ದವಡೆಯಲ್ಲಿ ಸಾಮಾನ್ಯವಾಗಿ 24 ಹಲ್ಲುಗಳಿರುತ್ತವೆ. ಆದರೆ ಅವು ಜಗಿಯಲು ಉಪಯುಕ್ತವಲ್ಲ. ಬರೀ ಎಳೆಯಲು, ಹರಿಯಲು ಮಾತ್ರ ಉಪಯುಕ್ತ. ಇವುಗಳ ಬಾಯಿ ಮುಚ್ಚುವುದು ಯಾಕೋ ತುಂಬ ಸುಲಭ. ನಮ್ಮ ಗಮ್ ಪೈಪ್‌ನಿಂದಲೂ ಬಾಯಿ ಮುಚ್ಚಬಹುದು. ಆದರೆ ಅವುಗಳ ಬಾಯಿಗೆ ಸಿಕ್ಕಿಕೊಂಡರೆ ತಪ್ಪಿಸಿಕೊಳ್ಳುವುದು ತುಂಬ ಕಷ್ಟದ ಮಾತು.

ಮೊಸಳೆಗಳ ಮೇಲ್ಭಾಗದ ಚರ್ಮ ತುಂಬಾ ಕಠಿಣ. ಅದೆಷ್ಟು ಗಟ್ಟಿ ಎಂದರೆ ಗುಂಡು ಕೂಡ ಅದನ್ನು ಸೀಳಲಾರದು. ಇವುಗಳ ಕಣ್ಣು ತುಂಬಾ ಭಯಾನಕ. ಅವು ಬೆಳಕನ್ನು ಪ್ರತಿಫಲಿಸುತ್ತಾ ಕೆಂಪನೆ ಹೊಳೆಯುತ್ತವೆ. ಇದಕ್ಕೆ ರೆಟಿನಾದ ಹಿಂದಿರುವ ಟೇಪ್ ಟವರ್ ಎಂಬ ಪೊರೆ ಕಾರಣ.

ನೀರಿನಲ್ಲಿ ಈಜಾಡಲು ಪ್ರಾರಂಭಿಸಿದರೆ ಗಂಟೆಗೆ 40 ಕಿ.ಮೀ. ವೇಗದಲ್ಲಿ ಮೊಸಳೆಗಳು ದೂರ ಕ್ರಮಿಸಬಲ್ಲವು. ನೆಲದ ಮೇಲೆ ಸುಮಾರು 25 ಕಿ.ಮೀ. ವೇಗದಲ್ಲಿ ಓಡಬಲ್ಲದು. ಮೊಸಳೆಗಳು ಬಾಯಿ ಬಿಟ್ಟು ಮಲಗಿರುತ್ತವೆ. ಯಾಕೆ ಗೊತ್ತಾ? ಅವು ಬೆವರುವುದು ಬಾಯಿಯ ಮೂಲಕ.

ಮೊಸಳೆಯ ಬಾಯಿಗೆ ಜೀವಜಾಲವೆಲ್ಲ ಹೆದರಿದರೂ, ಪ್ಲೇವರ್ ಜಾತಿಯ ಹಕ್ಕಿಗಳು ನೇರವಾಗಿ ಮೊಸಳೆಯ ಬಾಯಿ ಹೊಕ್ಕು ಹೊರಬರುತ್ತವೆ. ಆ ಹಕ್ಕಿಗಳ ಚಲನೆಯಿಂದ ಕಚಗುಳಿಯಾದರೂ ಮೊಸಳೆ ಮಾತ್ರ ಸುಮ್ಮನಿರುತ್ತದೆ. ಏಕೆಂದರೆ ಈ ಹಕ್ಕಿ ಮೊಸಳೆಯ ಹಲ್ಲುಗಳ ನಡುವೆ ಸಿಕ್ಕಿಕೊಂಡ ಆಹಾರದ ಕಣಗಳನ್ನು ಹೆಕ್ಕಿ ತೆಗೆದು ಅನಾರೋಗ್ಯ ಬಾರದಂತೆ ಕಾಯುತ್ತದೆಯಂತೆ. ಎಂಥ ವಿಚಿತ್ರ! ಎಲ್ಲಿಯ ಭಯಾನಕ ಮೊಸಳೆ, ಎಲ್ಲಿಯ ಪುಟಾಣಿ ಹಕ್ಕಿ? ■